ಶ್ರೀ ಬಿ. ಎಸ್. ಎಡಿಯೂರಪ್ಪ.—ನಾನೂ ಕೂಡ ಸ್ವಲ್ಪ ಜವಾಬ್ದಾರಿ ಸ್ಥಾನದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇರಬಹುದು. ನಿಮ್ಮ ಇಲಾಖೆಯಲ್ಲಿ ತಮ್ಮ ಅಧಿಕಾರಿಗಳು ಸ್ವಲ್ಪ ಎಚ್ಚರಿತ ವಹಿಸಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ನನಗೆ ಗೊತ್ತಿದ್ದಹಾಗೆ ಶಿಕಾರಿಪುರಕ್ಕೆ ಬಸ್ ಬರದೆ ವಾಪಸ್ಸು ಬಂದು, ಅಲ್ಲಿರತಕ್ಕಂತಹ ಪ್ರಯಾಣಿಕರಿಗೆ ಇದರಿಂದ ಅವ್ಯವಸ್ಥೆಯಾಗಿದೆ. ಅದನ್ನು ಸರಿಪಡಿಸಬೇಕು ಮತ್ತೆ ತಡವಾಗಿ ಬಸ್ಸು ಹೊರಡುವುದರಿಂದ ಬೇರೆ ಖಾಸಗಿ ಬಸ್‌ನವರು ಇದ್ದಂತಹ ಪ್ರಯಾಣಿಕರನ್ನೆಲ್ಲಾ ತುಂಬಿಕೊಂಡು ಹೋಗುತ್ತಾರೆ: ಸರ್ಕಾರದ ಬಸ್ಸು ಖಾಲಿ ಹೋಗುತ್ತದೆ. ಇದರಿಂದ ಲಾಭನಷ್ಟವು ಆಗುವುದರ ಜೊತೆಗೆ ಈ ರಸ್ತೆ ಲಾಭದಾಯಕವಾಗಿಲ್ಲವೆಂದು ಶಿಕಾರಿಪುರಕ್ಕೆ ಬಸ್ಸು ಬಂದು ಹೋಗುವುದನ್ನೇ ನಿಲ್ಲಿಸಿಬಿಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಡಿಸೆಂಬರ್ ಒಂದನೇ ತಾರೀಖಿನಿಂದ ೧೫ನೇ ತಾರೀಖಿನವರೆಗೆ ಪರಿಶೀಲನೆ ಮಾಡಿದಂತಹ ವಿವರಗಳು ಇಲ್ಲಿವೆ. ಪ್ರತಿಯೊಂದು ದಿವಸವೂ ಕೂಡ ಶಿವಮೊಗ್ಗ ಮಾರ್ಗವಾಗಿ ಶಿಕಾರಿಪುರಕ್ಕೆ ತಲುಪಿದೆ ಎಂದು ಆತ್ಯಂತ ಜವಾಬ್ದಾರಿಯಿಂದ ಈ ಮಾತನ್ನು ಹೇಳುವುದಕ್ಕೆ ತಯಾರಾಗಿದ್ದೇನೆ ಇರತಕ್ಕ ತೊಂದರೆಗಳನ್ನು, ಅನಾನುಕೂಲಗಳನ್ನು ಗಮನಿಸಿ ಹೊಸ ಬಸ್ಸನ್ನು ಕೊಟ್ಟಿದ್ದೇವೆ ಹೊಸ ಚಾಲಕರನ್ನೂ ಹಾಕಿದ್ದೇವೆ. ಜನವರಿ ತಿಂಗಳು ೧೬ ದಿವಸಗಳಲ್ಲಿ ೧೧ ದಿವಸ ಸರಿಯಾದ ಸಮಯಕ್ಕೆ ಬಸ್ಸು ಹೊರಟು ಸರಿಯಾದ ಸಮಯಕ್ಕೆ ತಲುಪಬೇಕಾದ ಸ್ಥಳವನ್ನು ತಲುಪಿದೆ. ಆದರೆ ಮಾನ್ಯ ಸದಸ್ಯರು ಹೇಳಿದಂತೆ ಅಂತಹ ನಿರ್ದಿಷ್ಟ ನಿದರ್ಶನಗಳು ಯಾವುದಾದರೂ ಇದ್ದರೆ, ಅದನ್ನು ಬರೆದು ಕಳುಹಿಸಿದರೆ ಅಂತಹವರ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೆಳಗ್ಗೆ ೫–೪೫ಕ್ಕೆ ಶಿಕಾರಿಪುರವನ್ನು ಬಿಟ್ಟು ಶಿವಮೊಗ್ಗಕ್ಕೆ ಬಂದು ಒಂದು ಗಂಟೆ ನಿಂತುಕೊಂಡಿರುತ್ತದೆ. ಇದರಿಂದ ಬೆಂಗಳೂರಿಗೆ ಬರತಕ್ಕಂತಹ ಪ್ರಯಾಣಿಕ ಒಂದೂ ಗಂಟೆ ತಡವಾಗಿ ಬರುವುದಕ್ಕೆ ತಯಾರು ಇರುವುದಿಲ್ಲ. ಆದ್ದರಿಂದ ಶಿಕಾರಿಪುರವನ್ನೇ ತಡವಾಗಿ ಬಿಟ್ಟು, ಶಿವಮೊಗ್ಗವನ್ನು ತಲುಪಿದ ೧೦–೧೫ ನಿಮಿಷದೊಳಗೆ ಶಿವಮೊಗ್ಗದಿಂದ ಆ ಬಸ್ಸು ಹೊರಡುವ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸೋಣ.

ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ

೧೦೪) ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

೧) ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಜನತಾ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು ?

೨) ಜೋಗ ಜಲಪಾತದ ಬಗ್ಗೆ ಪ್ರವಾಸಿಗರ ಆಕರ್ಷಣೆಯು ಇಳಿಮುಖವಾಗುತ್ತಿರುವುದನ್ನು ತಡೆಯಲು ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ.

೩) ರಾಜ್ಯದಲ್ಲಿನ ಆಕರ್ಷಕವಾದ ಜಲಪಾತಗಳೆಷ್ಟು ?

ಶ್ರೀ ಎಂ. ರಘುಪತಿ (ಮಾನ್ಯ ಪ್ರವಾಸೋದ್ಯಮ, ಪ್ರವಾಸೋದ್ಯಮ ಮತ್ತು ಪ್ರವಾಸೋದ್ಯಮ ಸಚಿವರು).—

೧) ಜನತಾ ಸರ್ಕಾರವು ಅಧಿಕಾರಕ್ಕೆ ಬಂದಮೇಲೆ ಮಂಗಳೂರು ಹಾಗೂ ಬೆಳಗಾಂ ನಲ್ಲಿ ವಿಮಾನ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

ಆಲಸೂರು ಕೆರೆ, ಎಡಿಯೂರು ಕೆರೆ, ಹೆಸರುಘಟ್ಟ ಕೆರೆ, ಹೊಸಕೋಟೆ ಕೆರೆ, ಗಾಜನೂರು ಕೆರೆ ಹಾಗೂ ಶಾಂತಿಸಾಗರ ಕೆರೆಗಳಲ್ಲಿ ದೋಣಿ ವಿಹಾರ ಸೌಲಭ್ಯವನ್ನು ಒದಗಿಸಲು ಉದ್ದೇಶಿಸಲಾಗಿದೆ.

ಪ್ರವಾಸಿಗರ ಅನುಕೂಲಕ್ಕಾಗಿ ಊಟ, ನಂದಿಬೆಟ್ಟ ಹಾಗೂ ಶ್ರೀರಂಗಪಟ್ಟಣದಲ್ಲಿ ವಸತಿ ಗೃಹಗಳನ್ನು ಮತ್ತು ಬನ್ನೇರುಘಟ್ಟದಲ್ಲಿ ಉಪಹಾರ ಗೃಹವನ್ನು ತೆರೆಯಲಾಗಿದೆ. ರಂಗನತಿಟ್ಟಿನಲ್ಲಿರುವ ಪಕ್ಷಿದಾಮದ ಕುರಿತು ಸಾಕ್ಷ್ಯ-ಚಿತ್ರವನ್ನು ತೆಗೆಯಲು ಉದ್ದೇಶಿಸ

ಆಗಿದೆ. ಇದಲ್ಲದೆ. ಕೃಷ್ಣರಾಜಸಾಗರದ ಬೃಂದಾವನದ ನವೀಕರಣದ ಪ್ರಯುಕ್ತವಾಗಿ ಸಂಗೀತ ಮತ್ತು ನೃತ್ಯದ ಕಾರಂಜಿಗಳನ್ನು ಆಳವಡಿಸಲಾಗಿದೆ.

೨) ವಿದ್ಯುಚ್ಛಕ್ತಿಯ ತೀವ್ರ ಕೊರತೆಯಿಂದಾಗಿ ಜಲಾಶಯದಲ್ಲಿನ ನೀರನ್ನು ಜಲಪಾತದಲ್ಲಿ ಬಿಡಲು ಸಾಧ್ಯವಾಗುವುದಿಲ್ಲ.

೩) ಒಟ್ಟು ಎಂಟು ಜೋಗ ಜಲಪಾತ, ರೋರಕ್ ಜಲಪಾತ, ಪಾಗೋಡ ಜಲಪಾತ, ಅಬ್ಬೆ ಜಲಪಾತ, ಉಂಚಳ್ಳಿ ಜಲಪಾತ, ಗೆರೆಸೊಪ್ಪೆ ಜಲಪಾತ, ಶಿವನಸಮುದ್ರ ಜಲಪಾತ ಮತ್ತು ಚುಂಚನಕಟ್ಟೆ ಜಲಪಾತ.

ಶ್ರೀ ಹೆಚ್. ಗಂಗಾಧರನ್ —ನನ್ನ (೧)ನೇ ಪ್ರಶ್ನೆಗೆ ಸೌಲಭ್ಯಗಳನ್ನೊದಗಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದೀರಿ. ಜನತಾ ಸರ್ಕಾರ ಬಂದಮೇಲೂ ಯೋಜನೆ, ಬರೀ ಯೋಜನಾ ರೂಪದಲ್ಲಿಯೇ ಇರುವ ಹಾಗೆ ಕಾಣುತ್ತದೆ. ಆ ಯೋಜನೆ ಪೂರ್ಣವಾಗಿ ಕಾರ್ಯಗತವಾಗುವುದು ಯಾವಾಗ ? ದೋಣಿ ವಿಹಾರ ಮತ್ತಿತರ ಸೌಲಭ್ಯಗಳನ್ನು ಒದಗಿಸಲು ಎಷ್ಟು ಹಣವನ್ನು ಮಂಜೂರ್ಮಾಡಿದ್ದೀರಿ ?

ಶ್ರೀ ಎಂ. ರಘುಪತಿ —ಅಲಸೂರು ಕೆರೆಯಲ್ಲಿ ದೋಣಿ ವಿಹಾರ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. ಎಡಿಯೂರು ಕೆರೆ, ಹೆಸರುಘಟ್ಟ ಕೆರೆ, ಹೊಸಕೋಟೆ ಕೆರೆ, ಮತ್ತು ಗಾಜನೂರು ಕೆರೆಗಳಿಗೂ ದೋಣಿಗಳನ್ನು ಬಿಡಲು ವ್ಯವಸ್ಥೆ ಮಾಡಿದ್ದೇವೆ, ಆದರೆ ಇನ್ನೂ ದೋಣಿಗಳು ಬಂದಿಲ್ಲ, ದೋಣಿಗಳು ಬಂದತಕ್ಷಣ ದೋಣಿ ವಿಹಾರ ಕಾರ್ಯವನ್ನು ಪ್ರಾರಂಭ ಮಾಡುತ್ತೇನೆ.

ಶ್ರೀ ಕೆ. ರಾಮಭಟ್.—ಪುತ್ತೂರು ತಾಲ್ಲೂಕಿನಲ್ಲಿ ಬಿಸಿನೀರು ಕೊಳ ಎಂದೂ ಇದೆ. ಅದನ್ನು ಪ್ರವಾಸಿ ಕೇಂದ್ರವಾಗಿ ಮಾಡುವ ವಿಚಾರ ಸರ್ಕಾರದ ಮುಂದಿದೆಯೆ ? ಅದಕ್ಕೆ ಹಣ ಒದಗಿಸುತ್ತೀರಾ?

ಶ್ರೀ ಎಂ. ರಘುಪತಿ.—ಇದೇ ಸದನದಲ್ಲಿ ಹಿಂದೆ ರಾಮಭಟ್ಟರು ಈ ಬಗ್ಗೆ ಪ್ರಶ್ನೆ ಕೇಳಿದ್ದರು. ಆಗ ನಾನು ಅವರಿಗೆ ವಚನ ಕೊಟ್ಟ ಪ್ರಕಾರ ಸ್ಥಳಕ್ಕೆ ಹೋಗಿದ್ದೆ, ಅದು ಉತ್ತಮವಾಗಿದೆ. ಅಂಥ ಒಂದು ಬಿಸಿನೀರಿನ ವ್ಯವಸ್ಥೆ ಇರುವ ಕಲ್ಯಾಣಿಗಳು ನಮ್ಮ ಭಾರತ ದೇಶದಲ್ಲಿ ಒಂದೆರೆಡು ಕಡೆ ಮಾತ್ರ ಇರಬಹುದು. ಆದ್ದರಿಂದ ಪುತ್ತೂರಿನಲ್ಲಿರುವ ಬಿಸಿನೀರಿನ ಕೊಳದ ಸಲುವಾಗಿ ಈ ಸಾಲಿನಲ್ಲಿ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ. ರಾಮದೇವ್.—ಬೆಂಗಳೂರು ನಗರದಲ್ಲಿ ಅಲಸೂರು ಕೆರೆ ಮಾತ್ರವಲ್ಲದೆ ಲಾಲ್‌ಭಾಗ್ ಕೆರೆ, ಸ್ಯಾಂಕಿ ಕೆರೆಗಳು ಇವೆ. ಅಲ್ಲೆಲ್ಲ ದೋಣಿ ವಿಹಾರ ವಿಸ್ತರಿಸುವುದಕ್ಕೆ ಪ್ರಯತ್ನ ಮಾಡಬಹುದೇ?

ಶ್ರೀ ಎಂ. ರಘುಪತಿ —ಸ್ಯಾಂಕಿ ಕೆರೆ ಮತ್ತು ಲಾಲ್‌ಭಾಗ್ ಕೆರೆಗಳನ್ನು ನಾನು ಮತ್ತು ನಗರ ಸಭೆಯ ಕಮೀಷನರ್ ಹೋಗಿ ನೋಡಿದ್ದೇವೆ, ಅವು ದೋಣಿ ವಿಹಾರಕ್ಕೆ ಸೂಕ್ತವಾಗಿರುವುದರಿಂದ ಅಲ್ಲಿ ಈ ವರ್ಷ ದೋಣಿ ವಿಹಾರ ಪ್ರಾರಂಭಿಸುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ.—ಹೊಸಕೋಟೆ ಕೆರೆಯಲ್ಲಿ ದೋಣಿ ವಿಹಾರ ನಡೆಸುವುದಕ್ಕೆ ವ್ಯವಸೆ ಮಾಡಿದ್ದೀರಿ. ಅದೇ ರೀತಿ ಅಲ್ಲಿ ಹೋಟಲ್ ಕಟ್ಟುವ ಮತ್ತು ಪಾರ್ಕ್ ಮಾಡುವ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಅದರ ಬಗ್ಗೆಯೂ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಮ್ಮ ಬಾದಾಮಿ ಐತಿಹಾಸಿಕ ಪ್ರಸಿದ್ಧವಾದ ಸ್ಥಳವೆಂದು ಮಂತ್ರಿಗಳಿಗೆ ಗೊತ್ತು. ಅಲ್ಲಿನ ಕೆ.ಎಸ್.ಟಿ.ಡಿ.ಸಿ.ಗೆ ೧೦ ಲಕ್ಷ ರೂಪಾಯಿ ಮಂಜೂರಾಗಿ ೯ ತಿಂಗಳಾಯಿತು. ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಕೆಲಸ ಪ್ರಾರಂಭಿಸುವುದಕ್ಕೆ ಬೇಗ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ ರಘುಪತಿ —ಆ ಬಗ್ಗೆ ಹೋದವಾರ ಮೀಟಿಂಗ್ ಕರೆದಿದ್ದೆ. ಕೆಲಸವನ್ನು ತಕ್ಷಣ ಪ್ರಾರಂಭಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಲ್. ಟಿ ತಿಮ್ಮಪ್ಪ ಹೆಗಡೆ.—ಜೋಗ್ ಜಲಪಾತದ ವಿಷಯದಲ್ಲಿ ವಿದ್ಯುಚ್ಛಕ್ತಿ ತೊಂದರೆ ಇರುವುದರಿಂದ ನೀರು ಬಿಡಲು ಆಗಿಲ್ಲವೆಂದು ಹೇಳಿದ್ದಾರೆ ವಿದ್ಯುಚ್ಛಕ್ತಿ ತೊಂದರೆಯ ವಿಷಯ ಪ್ರತ್ಯೇಕ. ನೀರು ಇರುವಾಗ ಏಕೆ ವ್ಯವಸ್ಥೆ ಮಾಡಬಾರದು ? ಆದರೂ ಮಂತ್ರಿಗಳು ಇದುವರೆಗೆ ಏನೂ ವ್ಯವಸ್ಥೆ ಮಾಡಿಲ್ಲ. ಇದರ ಬಗ್ಗೆ ತಾಂತ್ರಿಕ ಸಲಹೆ ಪಡೆದಿದ್ದಾರೆ, ಯಾವತ್ತೂ ನೀರು ಇದ್ದೇ

ಇದೆ. ನೀರು ವ್ಯರ್ಥವಾಗುತ್ತಿದೆ. ಆದ್ದರಿಂದ ವಿದ್ಯುಚ್ಛಕ್ತಿ ತೊಂದರೆ ಇಲ್ಲದಿರುವಂಥ ತಾಂತ್ರಿಕ ಅನುಕೂಲಗಳನ್ನು ಮಾಡಿ ಜಲಪಾತವನ್ನು ಜೀವಂತವಾಗಿ ಮಾಡುವುದಕ್ಕೆ ಸಾಧ್ಯವಿದೆ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎಂ. ರಘುಪತಿ.—ಆ ಬಗ್ಗೆ ಮೊನ್ನೆ ಮೀಟಿಂಗ್ ಮಾಡಿದ್ದೇನೆ. ಅದನ್ನು ಈ ಹಣಕಾಸಿನ ಸಾಲಿನ ಯೋಜನೆಯಲ್ಲಿ ಸೇರಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಶೃಂಗೇರಿಗೆ ತಮಗೆ ಗೊತ್ತಿರುವ ಹಾಗೆ ಅನೇಕ ಜನ ಯಾತ್ರಾರ್ಥಿಗಳು ಪ್ರತಿನಿತ್ಯ ಬರುತ್ತಾರೆ. ಇದನ್ನು ಪ್ರವಾಸೋದ್ಯಮ ಯೋಜನೆಯಲ್ಲಿ ಸೇರಿಸಿ ಬರ ತಕ್ಕ ಯಾತ್ರಾರ್ಥಿಗಳಿಗೆ ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಆ ಒಂದು ಭಾವನೆ ಪ್ರತಿಯೊಬ್ಬರಲ್ಲೂ ಇದೆ. ಎಲ್ಲೆಲ್ಲಿ ಯಾತ್ರಾ ಸ್ಥಳಗಳು ಇವೆಯೋ ಅಲ್ಲೆಲ್ಲ ಪ್ರವಾಸಿ ಕೇಂದ್ರಗಳನ್ನು ಮಾಡಬೇಕೆಂಬುದು ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯವಾಗಿದೆ. ಅದು ಸರಿಯಲ್ಲ. ಏಕೆಂದರೆ ಲಾಭ-ನಷ್ಟದ ವ್ಯವಹಾರ ನೋಡಿಕೊಂಡು ವ್ಯವಹರಿಸಬೇಕಾಗಿದೆ. ಅದಕ್ಕೆ ಮುಜರಾಯಿ ಇಲಾಖೆ ಸಂಬಂಧಿಸಿದ ಬೇಕಾದರೆ ವ್ಯವಸ್ಥೆ ಮಾಡುವುದಕ್ಕೆ ಏರ್ಪಾಡು ಮಾಡಬಹುದು.

ಶ್ರೀ ಹೆಚ್. ಗಂಗಾಧರನ್.—ಶಾಂತಿ ಸಾಗರಕ್ಕೆ ಎಷ್ಟು ರೂಪಾಯಿ ಯೋಜನೆ ತಯಾರು ಮಾಡಿದ್ದೀರಿ ? ಇದುವರೆಗೆ ಎಷ್ಟು ಹಣ ಕೊಟ್ಟಿದ್ದೀರಿ ಮತ್ತು ಯಾವಾಗ ಯೋಜನೆಯನ್ನು ಮುಗಿಸುತ್ತೀರಿ ? ನೀವು ೮ ಜಲಪಾತಗಳನ್ನು ಏನು ಹೇಳಿದ್ದೀರಿ ಅವೆಲ್ಲವನ್ನು ಪ್ರವಾಸಿ ಕೇಂದ್ರ ಗಳನ್ನಾಗಿ ಮಾಡುವುದಕ್ಕೆ ಸಾಧ್ಯವಿದೆ. ಆದ್ದರಿಂದ ಅವೆಲ್ಲವನ್ನು ಪ್ರವಾಸಿ ಕೇಂದ್ರಗಳನ್ನಾಗಿ ಮಾಡು ತ್ತೀರಾ ? ಅಥವಾ ಅವುಗಳ ಬಗ್ಗೆ ಸಾಕ್ಷ್ಯ ಚಿತ್ರವನ್ನು ತೆಗೆಯುತ್ತೀರಾ ? ತಮ್ಮಳ್ಳಿರತಕ್ಕ ಕಾವೇರಿ ನದಿಯನ್ನು ಇವತ್ತಿನ ದಿವಸ ಹೊಗೇನಕಲ್ ಹತ್ತಿರ ತಮಿಳ್ನಾಡಿನವರು ಪ್ರವಾಸಿ ಕೇಂದ್ರವನ್ನಾಗಿ ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದಿಸುತ್ತಿದ್ದಾರೆ. ಅದೇ ರೀತಿ ಅಲ್ಲಿ ಕರ್ನಾಟಕದ ಪರವಾಗಿ ಒಂದು ಪ್ರವಾಸಿ ಕೇಂದ್ರವನ್ನು ಮಾಡಿದರೆ ಕರ್ನಾಟಕಕ್ಕೂ ಪ್ರವಾಸಿಗರನ್ನು ಆಕರ್ಷಿಸುವುದಕ್ಕೆ ವ್ಯವಸ್ಥೆ ಆಗುತ್ತದೆ. ಇದನ್ನು ಪರಿಶೀಲಿಸುತ್ತೀರಾ ?

ಶ್ರೀ ಎಂ. ರಘುಪತಿ.—ನಾನು ಆ ಸ್ಥಳಕ್ಕೆ ಭೇಟಿ ನೀಡಿದ್ದೆ. ಅಲ್ಲಿ ಪ್ರವಾಸಿ ಕೇಂದ್ರವನ್ನು ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಜಲಪಾತಗಳ ಬಗ್ಗೆ ಸಾಕ್ಷ್ಯ ಚಿತ್ರಗಳನ್ನು ತೆಗೆಯಬೇಕೆಂದು ಹೇಳುವುದು ಉತ್ತಮವಾದ ಸಲಹೆಯಾದ್ದರಿಂದ ಅದನ್ನು ಸರ್ಕಾರ ಗಮನದಲ್ಲಿಟ್ಟು ಕೊಳ್ಳುತ್ತದೆ. ಅದೇ ರೀತಿ, ಶಾಂತಿ ಸಾಗರದ ಯೋಜನೆಯನ್ನು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಸಾತನೂರು ವಿಧಾನಸಭಾ ಕ್ಷೇತ್ರದಲ್ಲಿ ಸಾರಿಗೆ ಸೌಲಭ್ಯಗಳು

೧೩೪. ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ (ಸಾತನೂರು).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

೧) ಸಾತನೂರು ವಿಧಾನ ಸಭಾ ಕ್ಷೇತ್ರದ ಮುಖ್ಯವಾದ ಹಳ್ಳಿಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸು ವುದು ಸರಕಾರದಪರ ಗಮನದಲ್ಲಿದೆಯೇ ?

೨) ಈಗ ಎಷ್ಟು ರಸ್ತೆಗಳಲ್ಲಿ ಸರಕಾರಿ ವಾಹನಗಳ ಸಂಪರ್ಕವಿರುತ್ತದೆ, ಬೇಡಿಕೆಯಿರತಕ್ಕ ಹಳ್ಳಿಗಳ ಸಂಖ್ಯೆ ಎಷ್ಟು ?

೩) ಬೇಡಿಕೆಯಿರತಕ್ಕ ಹಳ್ಳಿಗಳಿಗೆ ಸರಕಾರಿ ಸಂಚಾರ ವ್ಯವಸ್ಥೆಯನ್ನು ಯಾವಾಗ ಒದಗಿಸ ಲಾಗುವುದು.

೪) ಈ ಕ್ಷೇತ್ರದ ಮುಖ್ಯ ರಸ್ತೆಯಾದ ಸಂಗಮ (ಮೇಕೆದಾಟು)ದಿಂದ ದೊಡ್ಡ ಆಲಹಳ್ಳಿ ಸಾತನೂರು ಮಾರ್ಗವಾಗಿ ಚೆನ್ನಪಟ್ಟಣಕ್ಕೆ ಸರಕಾರಿ ಸಾರಿಗೆ ಸಂಪರ್ಕ ವ್ಯವಸ್ಥೆಯಿದೆಯೆ ?

೫) ಚೆನ್ನಪಟ್ಟಣದಿಂದ ಅರಳಾಳುಸಂದ್ರಕ್ಕೆ ಮತ್ತು ಮೆಣಸಿಗನ ಹಳ್ಳಿಗೆ ಸಾರಿಗೆ ವ್ಯವಸ್ಥೆ ಮಾಡಲಾಗುವುದೇ ?